# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-719/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 12/05/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಅಂಬಿಕಾ ಚರಣ ಶೆಟ್ಟಿ.ಎನ್, ನಂದಳಿಕೆ ಗ್ರಾಮ ಮತ್ತು ಅಂಚೆ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಅಂಬಿಕಾ ಚರಣ ಶೆಟ್ಟಿ ಎನ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಕಾರ್ಕಳದ ನಂದಳಿಕೆ ಗ್ರಾಮದಲ್ಲಿ ಸರ್ವೆ ನಂ.339 ರಲ್ಲಿ ಶ್ರೀ ಸುರೇಶ್ ಶೆಟ್ಟಿ ಎನ್ನುವವರು ಅಕ್ರಮವಾಗಿ ಕಲ್ಲು ಗಣಿಗಾರಿಕೆಯನ್ನು ನಡೆಸುತ್ತಿದ್ದು, ಸದರಿ ಜಾಗವು ಅರಣ್ಯ ಇಲಾಖೆಗೆ ಸೇರಿದ ಜಾಗವಾಗಿರುತ್ತದೆ. ಈ ಬಗ್ಗೆ ದೂರು ಅರ್ಜಿಗಳನ್ನು ಎದುರುದಾರರಾದ ಶ್ರೀ ನಿರಂಜನ್, ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಉಡುಪಿ ಇವರಿಗೆ ನೀಡಿದ್ದು, ಸದರಿಯವರು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಈ ಬಗ್ಗೆ ಮಾಹಿತಿ ಹಕ್ಕು ಅಧಿನಿಯಮದಡಿ ಮಾಹಿತಿ ಕೋರಿದ್ದರೂ ಸಹ ಮಾಹಿತಿಯನ್ನು ನೀಡಲು ನಿರಾಕರಿಸಿರುತ್ತಾರೆ. ಸದರಿ ಅಕ್ರಮ ಗಣಿಗಾರಿಕೆಯಿಂದ ನಂದಳಿಕೆ ಗ್ರಾಮದಲ್ಲಿ ಪರಿಸರವು ಹಾಳಾಗಿರುತ್ತದೆ. ಸದರಿ ಗಣಿಗಾರಿಕೆಯಿಂದ ಮೂರು ಜನರು ಮೃತ ಪಟ್ಟಿದ್ದು, ಈ ಬಗ್ಗೆ ಕ್ರಿಮಿನಲ್ ಪ್ರಕರಣವು ಸಹ ನೋಂದಾಯಿಸಲ್ಪಟ್ಟಿರುತ್ತದೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಸದರಿ ಆಕ್ಷೇಪಣೆಯಲ್ಲಿ ಎದುರುದಾರರು ಗಣಿಗಾರಿಕೆಗೆ ಸಂಬಂಧಿಸಿದಂತೆ ಶ್ರೀ ಸುರೇಶ್ ಶೆಟ್ಟಿಯವರ ಪರವಾನಗೆಯನ್ನು ಮೇಲ್ಮನವಿ ಪ್ರಾಧಿಕಾರವು ನವೀಕರಿಸಿರುತ್ತಾರೆ. ಇದಲ್ಲದೇ, ಸದರಿ ಗಣಿಗಾರಿಕೆಗೆ ತಹಶೀಲ್ದಾರ್‌ರವರು ನಿರಾಕ್ಷೇಪಣಾ ಪತ್ರವನ್ನು ನೀಡಿರುತ್ತಾರೆ. ಗಣಿಗಾರಿಕೆಯಿಂದ ಮೂವರು ವ್ಯಕ್ತಿಗಳು ಸತ್ತಿರುವುದಿಲ್ಲ. ಮೂರು ಜನ ಹೆಂಗಸರು ಸರ್ವೆ ನಂ.233 ರಲ್ಲಿ ಇದ್ದಂತಹ ಹಳ್ಳದಲ್ಲಿ ಇದ್ದ ನೀರಿನಲ್ಲಿ ಬಟ್ಟೆಹೊಗೆಯಲು ಹೋಗಿ ಕಾಲು ಜಾರಿ ಬಿದ್ದು ಸತ್ತಿರುತ್ತಾರೆ. ಈ ಬಗ್ಗೆ ನ್ಯಾಯಿಕ ದಂಡಾಧಿಕಾರಿಗಳು,

ಕಾರ್ಕಳ ಇಲ್ಲಿನ ನ್ಯಾಯಾಲಯದಲ್ಲಿ ಪ್ರಕರಣವು ವಿಲೇಗೆ ಬಾಕಿ ಇರುತ್ತದೆ. ಈ ಕಾರಣಕ್ಕಾಗೆ ಸದರಿ ಜಾಗದಲ್ಲಿ ಈಗ ಗಣಿಗಾರಿಕೆಯನ್ನು ಮಾಡದೆ ನಿಲ್ಲಿಸಲಾಗಿದೆ ಎಂದು ತಿಳಿಸಿರುತ್ತಾರೆ.

3. ಸದರಿ ಎದುರುದಾರರ ಆಕ್ಷೇಪಣೆಯ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ಅದರಲ್ಲಿ ಸರ್ವೆ ನಂ.339/3–ಪಿ1ರಲ್ಲಿ 2.50 ಎಕರೆ ಜಮೀನಿದ್ದು, ಸದರಿ ಜಾಗ ಅರಣ್ಯ ಪ್ರದೇಶವಾಗಿರುತ್ತದೆ. ಸದರಿ ಜಾಗದಲ್ಲಿ ಗಣಿಗಾರಿಕೆಗಾಗಿ ನೀಡಿದ್ದ ಪರವಾನಗೆಯ ಅವಧಿ ಮುಕ್ತಾಯಗೊಂಡಿದ್ದು, ಸದರಿ ಗಣಿಯ ಮಾಲೀಕರು ಮತ್ತೆ ಗಣೆಗಾರಿಕೆಗಾಗಿ ಪರವಾನಗೆಯನ್ನು ನವೀಕರಿಸಲು ನಿಗಧಿತ ದಿನಾಂಕದೊಳಗೆ ಅರ್ಜಿಯನ್ನು ಸಲ್ಲಿಸದೇ ಇದ್ದ ಕಾರಣ, ಸದರಿ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಲಾಗಿರುತ್ತದೆ. ಸದರಿ ಆದೇಶದ ವಿರುದ್ಧ ಗಣಿ ಗುತ್ತಿಗೆದಾರರು ಪರಿಷ್ಕರಣೆಯನ್ನು ಜಂಟಿ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರಲ್ಲಿ ಸಲ್ಲಿಸಿದ್ದು, ಸದರಿ ಪರಿಷ್ಕರಣಾ ಅರ್ಜಿಯನ್ನು ಜಂಟಿ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರು ಸರಿಯಾಗಿ ಪರಿಶೀಲಿಸದೇ ಪರಿಷ್ಕರಣೆಯನ್ನು ಪುರಸ್ಕರಿಸಿರುತ್ತಾರೆ. ಸದರಿ ಜಂಟಿ ನಿರ್ದೇಶಕರು ವಾಸ್ತವವನ್ನು ಪರಿಗಣಿಸಿರುವುದಿಲ್ಲ. ಹಾಗೂ ಸದರಿ ಗಣಿಗಾರಿಕೆ ನಡೆಯುತ್ತಿದ್ದ ಜಾಗ ಅರಣ್ಯವಾಗಿರುತ್ತದೆಂಬುದನ್ನು ಪರಿಗಣಿಸದೇ ಪರವಾನಗೆಯನ್ನು ನವೀಕರಿಸಿರುತ್ತಾರೆ. ಆದ್ದರಿಂದ, ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

4. ಈ ಹಂತದಲ್ಲಿ ಉಡುಪಿಯ ಉಪಅರಣ್ಯ ಸಂರಕ್ಷಕರನ್ನು ಸ್ಥಳ ಪರಿಶೀಲನೆ ಮಾಡಿ ವರದಿ ಸಲ್ಲಿಸುವಂತೆ ಕೋರಲಾಗಿದ್ದು, ಅದರಂತೆ, ಉಪಅರಣ್ಯ ಸಂರಕ್ಷಣಾಧಿಕಾರಿಯವರು ತಮ್ಮ ವರದಿಯನ್ನು ಸಲ್ಲಿಸಿದ್ದು, ಪ್ರಕರಣದಲ್ಲಿ ಒಳಗೊಂಡ ಜಮೀನು ಅರಣ್ಯದಿಂದ ಕೂಡಿದ್ದು, ಅದು "deemed forest" ಆಗಿರುತ್ತದೆ. ಆದ್ದರಿಂದ, ಸದರಿ ಜಾಗದ ವಿಚಾರದಲ್ಲಿ ಯಾವುದೇ ಕ್ರಮ ಜರುಗಿಸುವ ಪೂರ್ವದಲ್ಲಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆಯಬೇಕಾಗಿರುತ್ತದೆ. ಆದ್ದರಿಂದ, ದೂರಿನಲ್ಲಿ ಒಳಗೊಂಡ ಜಾಗವನ್ನು ಭೂ ಮಾಪನೆಗೆ ಒಳಪಡಿಸಿ ಪರಿಶೀಲನಾ ಟಿಪ್ಪಣಿಯನ್ನು ಗಡಿ ಗುರುತುಗಳನ್ನು ಗುರುತಿಸಿ ಪ್ರತ್ಯೇಕವಾಗಿ ನಕಾಶೆಯಲ್ಲಿ ಗುರುತಿಸಿ ಸದರಿ ಜಾಗವನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವವರೆಗೆ ಅರಣ್ಯ ಇಲಾಖೆಯಿಂದ ಯಾವುದೇ ಕ್ರಮ ಕೈಗೊಳ್ಳಲು ಬರುವುದಿಲ್ಲವೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ವಿಭಾಗ, ಕುಂದಾಪುರ ಇವರು ತಿಳಿಸಿರುತ್ತಾರೆ (ಸದರಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ವರದಿಯನ್ನು ಹಾಜರುಪಡಿಸಲಾಗಿದೆ). ಮುಂದುವರೆದು, ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ತಮ್ಮ ವರದಿಯಲ್ಲಿ ಗಣಿ ಗುತ್ತಿಗೆಯನ್ನು ಮಂಜೂರು ಮಾಡಲು ಏಕಗವಾಕ್ಷಿ ಪದ್ಧತಿಯಲ್ಲಿ ಸರ್ಕಾರವು ಆದೇಶ ಸಂಖ್ಯೆ:ಸಿಐ/299ಎಂಎಂಎನ್/2011 ಬೆಂಗಳೂರು ದಿ:30/06/2011ರ ಪ್ರಕಾರ ಕಂದಾಯ ಇಲಾಖೆ, ಅರಣ್ಯ ಇಲಾಖೆ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಒಳಗೊಂಡಂತೆ ಜಿಲ್ಲಾಧಿಕಾರಿಗಳ

ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಟಾಸ್ಕ್ ಪೋರ್ಸ್ ಸಭೆಯಲ್ಲಿ ಗಣಿ ಗುತ್ತಿಗೆಯನ್ನು ಮಂಜೂರು ಕೋರಿ ಬರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಆ ಸಭೆಯಲ್ಲಿ ತೀರ್ಮಾನಿಸಿದಂತೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ಉಪನಿರ್ದೇಶಕರು/ಹಿರಿಯ ಭೂ ವಿಜ್ಞಾನಿಯವರು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಾವಳಿಯಂತೆ ಗಣಿ ಗುತ್ತಿಗೆಯನ್ನು ಮಂಜೂರು ಮಾಡುತ್ತಾರೆ. ವಲಯ ಅರಣ್ಯಾಧಿಕಾರಿ ಕಾರ್ಕಳ ಇವರು ಪ್ರಕರಣದ ಸ್ಥಳವನ್ನು ಪರಿಶೀಲಿಸಿದ್ದು, deemed forest ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಅಫಿಡೇವಿಟ್ ಸಲ್ಲಿಸಲು ಮತ್ತು ಕುಮ್ಕಿ ಬಗ್ಗೆ ತೀರ್ಮಾನಿಸಲು ಸರ್ಕಾರದಲ್ಲಿ ಬಾಕಿ ಇರುವುದರಿಂದ ಸದರಿ ಭೂಮಿಯನ್ನು ಡೀಮ್ಡ್ ಫಾರೆಸ್ಟ್/ಕುಮ್ಕಿ ಎಂದು ಪರಿಗಣಿಸಬಹುದಾಗಿದೆ ಎಂದು ತಿಳಿಸಿರುತ್ತಾರೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

5. ಈ ಹಂತದಲ್ಲಿ ಎದುರುದಾರರುಗಳ ಆಕ್ಷೇಪಣೆ ಮೇರೆಗೆ ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಅದರಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮೇಲೆ ಹೇಳಿದ ಸರ್ವೆ ನಂ.339/3 ರಲ್ಲಿ ಇರುವ 2.98 ಎಕರೆ ಜಮೀನು ಡೀಮ್ಡ್ ಫಾರೆಸ್ಟ್ ಎಂದು ತಿಳಿಸಿರುತ್ತಾರೆ. ಹಾಗೂ ಸದರಿ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯವರು ಸದರಿ ಜಮೀನನ್ನು ಸರ್ವೆ ಮಾಡಿಸಿ ಹದ್ದುಬಸ್ತು ಗುರುತಿಸಿ ಸದರಿ ಜಾಗವನ್ನು ಅರಣ್ಯ ಇಲಾಖೆಗೆ ವರ್ಗಾಯಿಸಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ, ವಲಯ ಅರಣ್ಯಾಧಿಕಾರಿಗಳು ಕರ್ನಾಟಕ ಸರ್ಕಾರವು ಡೀಮ್ಡ್ ಫಾರೆಸ್ಟ್/ಕುಮ್ಕಿ ಜಮೀನಿನ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಅಫಿಡೇವಿಟ್ ಸಲ್ಲಿಸುವ ಸಲುವಾಗಿ ಸದರಿ ಜಮೀನನ್ನು ಸಧ್ಯದಲ್ಲಿ ಡೀಮ್ಡ್ ಫಾರೆಸ್ಟ್/ಕುಮ್ಕಿ ಜಮೀನು ಎಂದು ಪರಿಗಣಿಸಬೇಕೆಂದು ತಿಳಿಸಿರುತ್ತಾರೆ. ಇದರಿಂದ, ಸರ್ಕಾರಕ್ಕೆ ಸದರಿ ಜಮೀನು ಅರಣ್ಯ ಇಲಾಖೆಗೆ ಸೇರಿದ ಜಮೀನು ಅಥವಾ ಕುಮ್ಕಿ ಜಮೀನು ಎಂಬುದು ಸ್ಪಷ್ಟವಾಗಿರುವುದಿಲ್ಲ. ಅಂತಹ ಸಮಯದಲ್ಲಿ ಸದರಿ ಜಮೀನಿನಲ್ಲಿ ಗಣಿಗಾರಿಕೆಗಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪರವಾನಗೆ ನೀಡುವ ಸಲುವಾಗಿ ನೀಡಿರುವುದು ಸಮಂಜಸವಾಗಿರುವುದಿಲ್ಲ. ಇದಲ್ಲದೇ, ಗಣಿಗುತ್ತಿಗೆದಾರರಾದ ಶ್ರೀ ಸುರೇಶ್ ಶೆಟ್ಟಿಯವರು ಸರ್ಕಾರಕ್ಕೆ ರಾಜಧನವಾದ ರೂ.11,94,145/- ಅನ್ನು ಸರ್ಕಾರಕ್ಕೆ ಕಟ್ಟಿರುವುದಿಲ್ಲ. ಈ ಬಗ್ಗೆಯೂ ಸಹ ಎದುರುದಾರರು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

6. ದೂರಿನಂಶಗಳನ್ನು ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಸಲ್ಲಿಸಿರುವ ವರದಿಯನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ನಂದಳಿಕೆ ಗ್ರಾಮದ ಸರ್ವೆ ನಂಬರ್ 339ರ ಜಮೀನು ಡೀಮ್ಡ್ ಫಾರೆಸ್ಟ ಅಥವಾ ಕುಮ್ಕಿ ಜಮೀನು ಎಂಬುದರ ಬಗ್ಗೆ ಸ್ಪಷ್ಟತೆ ಇರುವುದಿಲ್ಲವೆಂಬುದು ಅರಣ್ಯ ಸಂರಕ್ಷಣಾಧಿಕಾರಿಗಳ ವರದಿಯಿಂದ ಕಂಡು ಬರುತ್ತದೆ. ಹಿರಿಯ ಭೂ

ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಉಡುಪಿ ಇವರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ಶ್ರೀ ಸುರೇಶ್ ಶೆಟ್ಟಿಯವರು ದಿನಾಂಕ 30/03/2012 ರಂದು ತಮ್ಮ ಗುತ್ತಿಗೆ ಪರವಾನಗೆಯನ್ನು ನವೀಕರಿಸಲು ಅರ್ಜಿ ಸಲ್ಲಿಸಿದ್ದು, ಅವರ ಅರ್ಜಿಯು ಕಾಲಮಿತಿಯೊಳಗೆ ಇಲ್ಲದೇ ಇದ್ದ ಕಾರಣ ತಿರಸ್ಕೃತವಾಗಿದ್ದು, ಸದರಿ ಆದೇಶದ ಮೇರೆಗೆ ಅರ್ಜಿದಾರರು ಜಂಟಿ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಮೈಸೂರು ಇವರಿಗೆ ಮೇಲ್ಮನವಿಯನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿಯಲ್ಲಿ ವಿಳಂಭವಾಗಿ ಸಲ್ಲಿಸಿದ ಅರ್ಜಿಯನ್ನು ವಿಳಂಭ ಮನ್ನ ಮಾಡಿ ಪರಿಗಣಿಸಲು ನಂತರ ಡೀಮ್ಡ್ ಫಾರೆಸ್ಟ್ ಸೇರಿರುವ ಪ್ರದೇಶವನ್ನು ಹೊರತುಪಡಿಸಿ ಉಳಿಕೆ ಪ್ರದೇಶಕ್ಕೆ ಕಂದಾಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ನಂತರ ಅರಣ್ಯ ಮತ್ತು ಪರಿಸರ ಜೀವ ಶಾಸ್ತ್ರ ಇಲಾಖೆಯಿಂದ ಪತ್ರಪಡೆದು, ಟಾಸ್ಕ್ ಪೋರ್ಸ್ ಸಮಿತಿಯಲ್ಲಿ ಮಂಡಿಸಿ ಸಭೆಯ ತೀರ್ಮಾನದಂತೆ ಕಲ್ಲು ಗಣಿ ಗುತ್ತಿಗೆ ನವೀಕರಣಕ್ಕೆ ಕ್ರಮ ವಹಿಸಲು ಆದೇಶಿಸಿರುತ್ತಾರೆ (ಸದರಿ ಆದೇಶದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಇದಲ್ಲದೇ, ಜಂಟಿ ಪರಿಶೀಲನಾ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ರಾಷ್ಟ್ರೀಯ ಹೆದ್ದಾರಿಯು ಗಣಿಗಾರಿಕೆ ಸ್ಥಳದಿಂದ 20.00 ಕಿ.ಮೀ., ದೂರದಲ್ಲಿರುತ್ತದೆ ಎಂದು ರಾಜ್ಯ ಹೆದ್ದಾರಿಯು ನಾಲ್ಕು ಕಿ.ಮೀ., ಅಂತರದಲ್ಲಿ ಇರುತ್ತದೆ ಎಂದು ಜಿಲ್ಲಾ ಪ್ರಧಾನ ರಸ್ತೆಯು 1.50 ಕಿ.ಮೀ., ಅಂತರದಲ್ಲಿ ಇರುತ್ತದೆ ಎಂದು ಹಾಗೂ ಇತರೆ ರಸ್ತೆ 200 ಮೀ., ಅಂತರದಲ್ಲಿ ಇರುತ್ತದೆ ಎಂದು ಮನೆಗಳು ಚದುರಿದಂತೆ ಕಂದಾಯ ಗ್ರಾಮದಲ್ಲಿ 500.00 ಮೀ., ವ್ಯಾಪ್ತಿ ಒಳಗೆ ಇರುತ್ತದೆ ಎಂದು ತಿಳಿಸಿರುತ್ತಾರೆ (ಸದರಿ ಜಂಟಿ ಪರಿಶೀಲನಾ ವರದಿಯನ್ನು ಹಾಜರುಪಡಿಸಲಾಗಿದೆ). ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ನಂದಳಿಕೆ ಗ್ರಾಮದ ಸರ್ವೇ ನಂಬರ್ 339ರ ಜಮೀನು ಡೀಮ್ಡ್ ಫಾರೆಸ್ಟ್ ಏರಿಯಾದಲ್ಲಿ ಬರುತ್ತದೋ ಅಥವಾ ಕುಮ್ಕಿ ಸ್ಥಳದಲ್ಲಿ ಇದೆಯೋ ಎಂಬುದು ಸ್ಪಷ್ಟ ಪಟ್ಟಿರುವುದಿಲ್ಲ. ಕಲ್ಲು ಗಣಿಗಾರಿಕೆಗೆ ಕೊಟ್ಟಿರುವ ಜಾಗದಲ್ಲಿ ಕಲ್ಲು ಬಂಡೆಗಳು ಇರುವುದಾಗಿ ತಹಶೀಲ್ದಾರ್‌ರವರು ನೀಡಿರುವ ಎನ್‌ಒಸಿ ಯಲ್ಲಿ ತಿಳಿಸಲಾಗಿರುತ್ತದೆ. ಆದರೆ, ಸುತ್ತಮುತ್ತಲಿನ ಪರಿಸರದಲ್ಲಿ ಅರಣ್ಯ ಇದೆಯೋ ಇಲ್ಲವೋ ಎಂಬುದನ್ನು ಪರಿಗಣಿಸದೇ ಇರುವುದು ಕಂಡು ಬರುತ್ತದೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಸದರಿ ಜಮೀನಿನ ಭೂಮಿಯ ಸ್ವಭಾವ (nature of the land) ಅಸ್ಪಷ್ಟತೆ ಇರುವುದರಿಂದ ಹಾಗೂ ಸದರಿ ಸರ್ವೇ ನಂಬರ್ 339 ಡೀಮ್ಡ್ ಫಾರೆಸ್ಟ್ ಏರಿಯಾದಲ್ಲಿ ಬರುತ್ತದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ತಮ್ಮ ವರದಿಯಲ್ಲಿ ತಿಳಿಸಿರುವ ಹಿನ್ನೆಲೆಯಲ್ಲಿ ಸದರಿ ಸರ್ವೇ ನಂಬರ್ 339ರ ಜಮೀನಿನಲ್ಲಿ ಗಣಿಗಾರಿಕೆ ಗುತ್ತಿಗೆಯ ಪರವಾನಗೆಯನ್ನು ನೀಡಿರುವುದು ಸಮಂಜಸವಲ್ಲವೆಂದು ಕಂಡು ಬರುತ್ತದೆ.

7. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ಜಿಲ್ಲೆಯ, ಕಾರ್ಕಳ ತಾಲ್ಲೂಕಿನ ನಂದಳಿಕೆ ಗ್ರಾಮದ ಸರ್ವೇ ನಂಬರ್ 339ರ ಜಮೀನು ಡೀಮ್ಡ್ ಫಾರೆಸ್ಟ್ ಅಥವಾ ಕುಮ್ಕಿ ಜಮೀನು**

ಎಂಬುದನ್ನು ತೀರ್ಮಾನಿಸುವವರೆಗೂ ಸದರಿ ಸರ್ವೇ ನಂಬರ್‌ನಲ್ಲಿ ಕಲ್ಲುಗಣಿಗಾರಿಕೆ ಗುತ್ತಿಗೆ ನೀಡುವುದನ್ನು ತಡೆಹಿಡಿಯಬೇಕೆಂದು ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 12/5/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
~~ಕರ್ನಾಟಕ ರಾಜ್ಯ,~~
**ಬೆಂಗಳೂರು.** 12/5/17